ಪರ್ಯಾಲೋಚನಾ ಪ್ರಸ್ತಾವ

ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 1995

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ನಾನು ಸದನದಲ್ಲಿ ಮಂಡಿಸಿರತಕ್ಕಂಥ ಲೋಕಾಯುಕ್ತ ಮಸೂದೆಯನ್ನು ತಾವು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ. ಇಲ್ಲಿ ತಂದಿರುವಂಥದ್ದು ನಾವು ಎರಡು ತಿದ್ದುಪಡಿಯನ್ನು ತಂದಿದ್ದೇವೆ. ಒಂದು ಸೆಕ್ಷನ್ 13 ರಲ್ಲಿ "Secretary" means a Secretary to Government of Karnataka and includes a special Secretary, an Additional Secretary and a Joint Secretary ಅದಕ್ಕೆ ಚೀಫ್ ಸೆಕ್ರೆಟರಿ ಎನ್ನುವುದನ್ನು ಒಂದು ತಿದ್ದುಪಡಿ ತಂದಿದ್ದೇವೆ. ಇನ್ನು the Chief Minister, a Minister or a Secretary, a member of the State Legislature. ಅದಕ್ಕೆ ಒಂದು ಸಣ್ಣ ತಿದ್ದುಪಡಿಯನ್ನು ತಂದಿದ್ದೇವೆ. ಅದರಲ್ಲೂ ಕೂಡ ತಂದಿರುವ ತಿದ್ದುಪಡಿ the Chief Minister, a minister or a Secretary, a member of the State Legislature ಏನು ಇದೆ, ಅದಕ್ಕೆ ಅಲ್ಲೂ ಕೂಡ ಚೀಫ್ ಸೆಕ್ರೆಟರಿ ಎನ್ನುವ ಒಂದು ಪ್ರಾವಿಷನನ್ನು ಮಾಡಿದ್ದೇವೆ. ಇದರ ಉದ್ದೇಶ ಇಷ್ಟೆ. ಈ ಒಂದು ಕಾನೂನಿನ ವ್ಯಾಪ್ತಿಯಲ್ಲಿ ಚೀಫ್ ಮಿನಿಸ್ಟರ್ ಇಲ್ಲಿ ಸೇರಿರುವುದರಿಂದ ಚೀಫ್ ಮಿನಿಸ್ಟರ್ ಮತ್ತು ಮಿನಿಸ್ಟರ್‌ಗಳು ಸೇರಿರುವುದರಿಂದ ಚೀಫ್ ಸೆಕ್ರೆಟರಿ ಎನ್ನುವಂಥದ್ದು ಏನು ಕೈಬಿಟ್ಟು ಹೋಗಿದೆ, ಅದನ್ನು ಸೇರಿಸತಕ್ಕಂಥದ್ದು ಇದರ ಉದ್ದೇಶ ಇದೆ. ಇದನ್ನು ದಯಮಾಡಿ ಇದನ್ನು ಸಭೆ ಅಂಗೀಕಾರ ಮಾಡಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವೇ. ರಾಮಕೃಷ್ಣ (ಆನೇಕಲ್) : ಇದನ್ನು ಒಪ್ಪುತ್ತೇನೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಈಗ ತಾನೆ ಭಾಷಣ ಮಾಡಿ ಕೇಳಿದರು. ಇದನ್ನು ಪ್ರಪ್ರಥಮ ಬಾರಿಗೆ ಇಡೀ ದೇಶದಲ್ಲಿ ನಮ್ಮ ರಾಜ್ಯ 1984ರಲ್ಲಿ ಜಾರಿಗೆ ತಂದರು ಎಂದು. ಅದನ್ನು ಒಪ್ಪುತ್ತೇನೆ. ಅದನ್ನು ಯಾವ ಸಂದರ್ಭದಲ್ಲಿ ತಂದರು ಎನ್ನುವುದನ್ನು ತಾವು ಪರ್ಯಾಲೋಚನೆ ಪ್ರಣಾಳಿಕೆಯಲ್ಲಿ ಲೋಕಾಯುಕ್ತ ಬಿಲ್ ತರುತ್ತೇವೆ ಎಂದು ಹೇಳಿದಿರಿ. ಕೂಡಲೇ ಅವಸರ ಅವಸರವಾಗಿ ಅದನ್ನು ತೆಗೆದುಕೊಂಡು ಬಂದಿರಿ. ಇದನ್ನು ನಾನು ಏತಕ್ಕೆ ಹೇಳುತ್ತೇನೆ ಎಂದರೆ ಸಮಗ್ರವಾಗಿ ಯೋಚನೆ ಮಾಡಿ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಇದನ್ನು ಸಂಪೂರ್ಣವಾಗಿ ಏನು ಮಾಡಬೇಕು, ಯಾವ ರೀತಿ ಮಾಡಬೇಕು, ಯಾವ ಯಾವ ವಿಷಯಗಳನ್ನು ಸೇರಿಸಬೇಕು ಎಂದು ಮಾಡ್ದಿದ್ದರೆ ಮಾಡದಿದ್ದರೆಬಿಲ್ ಪರಿಪೂರ್ಣವಾಗಿರುತ್ತಿತ್ತು. ಇದನ್ನು ನೋಡಿದರೆ ಬಿಲ್ ಪರಿಪೂರ್ಣವಾಗಿಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆಗಳನ್ನು ಕೊಡುತ್ತೇನೆ. ತಾವು ಇವತ್ತು ಇದು ಬಹಳ ಎಫೆಕ್ಟೀವಾಗಿ ಜಾರಿಗೆ ಬರಬೇಕಾದರೆ ಅಂಥ ಪರ್ಸನಾಲಟೀಸ್ ಅಲ್ಲಿ ಇರಬೇಕು. ನಾನು ಕಮೀಷನ್ ಬಗ್ಗೆ ಹೇಳುತ್ತಿಲ್ಲ. ಕಮೀಷನ್‌ನಲ್ಲಿ ಸುಪ್ರೀಂ ಕೋರ್ಟ್ ಜಡ್ಜ್ ಇರುತ್ತಾರೆ. ಹೈಕೋರ್ಟ್ ಜಡ್ಜ್ ಇರುತ್ತಾರೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಸ್ವಲ್ಪ ಎಕ್ಸಪ್ಲನೇಷನನ್ನು ಕೊಡುವಾಗ ಅಪೂರ್ಣವಾಗಿದೆ, ಅದಕ್ಕೋಸ್ಕರ ತಮ್ಮ ಮುಂದೆ ಹೇಳಬೇಕೆಂದರೆ ಮೊದಲನೆಯದು ಏನು ಒಂದು ತಿದ್ದುಪಡಿ ಇದೆ, ಏಳನೆಯ ಪ್ರಕರಣದ ತಿದ್ದುಪಡಿ ಮತ್ತು ಎರಡನೆಯ ಪ್ರಕರಣದ ತಿದ್ದುಪಡಿ, ಇಲ್ಲಿ ಸೆಕ್ರೆಟರಿ ಎನ್ನುವ ಬಗ್ಗೆಯೂ 'ಮುಖ್ಯ ಕಾರ್ಯದರ್ಶಿ' ಎಂದು ಸೇರತಕ್ಕಂಥದ್ದು ಒಂದು ತಿದ್ದುಪಡಿ ಇದೆ. ಇನ್ನೊಂದು ಒಬ್ಬ ಕಾರ್ಯದರ್ಶಿ ಅಥವಾ ಈ ಮುಂದಿನ ಪರಂತುವನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ : "ಪರಂತು, (3)-ಎ ಮತ್ತು (4)ನೇ ಖಂಡಗಳಲ್ಲಿ ಉಲ್ಲೇಖಿಸಲಾದ ಸಾರ್ವಜನಿಕ ನೌಕರರ ಸಂಬಂಧದಲ್ಲಿ, ಲೋಕಾಯುಕ್ತನು,

ಅಂಥ ಕ್ರಮವು ಒಂದು ದೂರು ಇಲ್ಲವೇ ಆಪಾದನೆಯ ಕಾರಣ ಅದು ವಸ್ತುವಾಗಬಹುದು ಅಥವಾ ಆಗಿರಬಹುದಾಗಿತ್ತು ಎಂದು ಅಭಿಪ್ರಾಯ ಪಡುವ ಯಾವುದೇ ಸಂದರ್ಭದಲ್ಲಿ ಅವನು ಅಂಥ ಕ್ರಮದ ಕುರಿತು ಸಹ ತನಿಖೆ ಮಾಡಬಹುದು. "ಏತಕ್ಕೆ ಈ ತಿದ್ದುಪಡಿ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ ಎಂದರೆ ತಾನಾಗಿಯೇ ಲೋಕಾಯುಕ್ತಕ್ಕೆ ಇವತ್ತು ತನಿಖೆ ಮಾಡುವಂಥ ಒಂದು ಅವಕಾಶ ಏನಿತ್ತು. ಅದನ್ನು ತೆಗೆದಿದ್ದಾರೆ. ಅದು ವಾಪಸ್ ಕೊಡಬೇಕೆನ್ನುವುದೇ ನಮ್ಮ ಇಚ್ಛೆ ಇದೆ. ಕಾರಣವಿಷ್ಟೆ. ಮೂರೂವರೆ ಸಾವಿರ ರೂಪಾಯಿ ಸಂಬಳಕ್ಕೆ ಮೇಲೆ ಇರತಕ್ಕಂಥವರು ಯಾರು ಇದ್ದಾರೋ ಅವರ ಮೇಲೆ ತನಿಖೆ ನಡೆಸುವಾಗ ಅದು ಸರ್ಕಾರ ಹೇಳಿದರೆ ಮಾತ್ರ ನಡೆಸಬೇಕು ಇಲ್ಲದಿದ್ದರೆ ನಡೆಸಬಾರದು ಎನ್ನುವ ಒಂದು ಏನು ಇವತ್ತಿನ ಪರಿಸ್ಥಿತಿ ಇದೆ. ಅದನ್ನು ನಾವು ವಿಮುಕ್ತರನ್ನಾಗಿ ಮಾಡಿ ಯಾವನೇ ಅಧಿಕಾರಿ ಇರಲಿ, ಅವನು ಮೂರುವರೆ ಸಾವಿರ ರೂಪಾಯಿ ಸಂಬಳ ತೆಗೆದುಕೊಳ್ಳಬಹುದು, ಆರು ಸಾವಿರ ತೆಗೆದುಕೊಳ್ಳಬಹುದು, ಹತ್ತು ಸಾವಿರ ತೆಗೆದುಕೊಳ್ಳಬಹುದು, ಇವತ್ತು ಮುಖ್ಯಮಂತ್ರಿ ಮೇಲೆಯೇ ತನಿಖೆ ನಡೆಸುವುದಕ್ಕೆ ಅವಕಾಶ ಇಲ್ಲಿ ಇರುವಾಗ ಅಧಿಕಾರಿಗಳಿಗೆ ಈ ಒಂದು ಚೌಕಟ್ಟಿನೊಳಗೆ ಆ ರಕ್ಷಣೆ ಇರಬಾರದು. Even the Lokayukta is entitled to start any enquiry or enquire against any type of officer concerned. ಎನ್ನುವುದು ಇದರ ಮೂಲ ಉದ್ದೇಶ ಇದೆ. ಇವತ್ತು ಇದಕ್ಕೆ ಸೀಮಿತವಾದ ಎರಡು ತಿದ್ದುಪಡಿ ಇದೆ. ಒಂದು ಚೀಫ್ ಸೆಕ್ರೆಟರಿಯನ್ನು ಅಳವಡಿಸುವುದು. ಇನ್ನೊಂದು ಮೂರೂವರೆ ಸಾವಿರ ರೂಪಾಯಿ ಮೇಲೆ ಇರುವ ಅಧಿಕಾರಿ ವೃಂದದವರು ಏನಿದ್ದಾರೆ, ಅವರ ಮೇಲೆ ಕೂಡ ಇದು ಇರುವಂಥದ್ದು. ಇದಕ್ಕೆ ಸರ್ಕಾರದ ಪರವಾನಿಗೆ ಬೇಕಾಗಿಲ್ಲ. ನಾವು ಒಂದು ಸ್ಟೆಪ್ ಮುಂದೆ ಹೋಗಿದ್ದೇವೆ ಎಂದು ನೀವು ಸ್ವಾಗತ ಮಾಡಿದಿರಿ. ನೀವು ಹೇಳಿದ್ದುದನ್ನೂ ಒಪ್ಪಿಕೊಳ್ಳುತ್ತೇನೆ. ಸಮಗ್ರ ತಿದ್ದುಪಡಿ ತರುವುದಕ್ಕೆ ನಾನು ತಮ್ಮನ್ನೆ ಕರೆದು ಕನ್‌ಸಲ್ಟ್ ಮಾಡುವುದಕ್ಕೆ ಸಿದ್ಧನಿದ್ದೇನೆ. ಆದರೆ ಇವತ್ತು ನಮ್ಮ ಮುಂದೆ ಈ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ ಈ ಭ್ರಷ್ಟಾಚಾರದ ಆಪಾದನೆ ಬಂದಾಗ ಎಂದು ಇದೆಯೋ, ಅದಕ್ಕೆ ಇಮ್ಮೀಡಿಯೇಟ್ ಆಗಿ ಆಟ್‌ಲೀಸ್ಟ್ ಕೊನೆಗೆ ಎರಡು ಕಾನೂನಿನ ತಿದ್ದುಪಡಿ ತರುವುದರಿಂದ ಸ್ವಲ್ಪ ಮಟ್ಟಿಗೆ ಹೆಚ್ಚು ಇದಕ್ಕೆ ಶಕ್ತಿ ಕೂಡಿ ಬರಬಹುದು ಎನ್ನುವ ಕಾರಣದಿಂದ ಈ ತಿದ್ದುಪಡಿಯನ್ನು ತಂದಿದ್ದೇನೆ.

ಶ್ರೀ ವೈ. ರಾಮಕೃಷ್ಣ : ಇದನ್ನು ನಾನು ಸ್ವಾಗತ ಮಾಡುತ್ತೇನೆ ಎಂದು ಮೊದಲೇ ಹೇಳಿದೆ. ಈ ಎರಡು ತಿದ್ದುಪಡಿಯನ್ನು ತಂದಿದ್ದೀರಿ. ಯಾವ ಉದ್ದೇಶದಿಂದ ಈ ಅಮೆಂಡ್‌ಮೆಂಟ್ಸ್‌ನ್ನು ತಂದಿದ್ದೀರಿ; ಅದನ್ನು ನಾನು ಸ್ವಾಗತ ಮಾಡುತ್ತೇನೆ. ಸ್ವಾಗತ ಮಾಡುತ್ತೇನೆ ಎಂದರೆ ಅಷ್ಟು ಮಾತ್ರಕ್ಕೆ ಕಾರ್ಯಾಚರಣೆ ಚೆನ್ನಾಗಿ ಆಗುತ್ತದೆ ಎಂದು ತಾವು ಭಾವಿಸಬೇಡಿ. ಅದನ್ನು ನಾನು ಹೇಳುತ್ತಿರುವುದು. ಈಗ ಉದಾಹರಣೆಗೆ ಕಮೀಷನ್ ಅಲ್ಲಿ ಕುಳಿತಿರುತ್ತದೆ; ಇನ್‌ವೆಸ್ಟಿಗೇಷನ್ ಬಹಳ ಮುಖ್ಯವಾದುದು. ಇನ್‌ವೆಸ್ಟಿಗೇಷನ್ ಮುಖ್ಯವಾದರೆ ಫಲಿತಾಂಶ ಅಲ್ಲಿ ಫೇಲ್ ಆಗುತ್ತದೆ. ಅದಕ್ಕೋಸ್ಕರ ಎಂಥವರನ್ನು ನೀವು ಅಲ್ಲಿ ನೇಮಿಸಬೇಕು? ಈಗ ಏನು ಅಲ್ಲಿ ಕರಪ್‌ಷನ್ ಬಗ್ಗೆ ಹೇಳಿದ್ದೀರಿ, ನೆಪೊಟಿಸಂ ಬಗ್ಗೆ ಹೇಳಿದ್ದೀರಿ, ಫೇವರಿಟಿಸಂ ಬಗ್ಗೆ ಹೇಳಿದ್ದೀರಿ ನಿಮ್ಮ ಡೆಫೆನಿಷನ್‌ನಲ್ಲಿ ಈ ಮೂರಕ್ಕೂ ತಾವು ಹೇಳಿದ್ದೀರಿ. ಅದಕ್ಕೂ ಇನ್ನೂ ಬಹಳ ಸೇರಿಸುವುದು ಇದೆ. ಉದಾಹರಣೆಗೆ ಹೇಳಬೇಕೆಂದರೆ Negligence, undue delay, dereliction of duty, excessive abuse of powers, identification of force, reservation of backward classes, obtaining false certificates etc.,

ಅದು ಇನ್‌ವೆಸ್ಟಿಗೇಷನ್ ಮಾಡುವುದು. ಇನ್‌ವೆಸ್ಟಿಗೇಷನ್ ಅವರಿಗೆ ತಾನೇ ಹೋಗುವುದು. ಈಗ ವಿಜಿಲೆನ್ಸ್‌ಗೆ ನಾವು ಕೊಡುತ್ತೇವೆ. ಒಬ್ಬ ಅಧಿಕಾರಿ ಈ ರೀತಿ ಮಾಡಿದ್ದಾನೆ ಎಂದು ಕೊಡುತ್ತೇವ. ಅದನ್ನು ಪರೀಕ್ಷೆ ಮಾಡಬಹುದಲ್ಲಾ. ಅದರಲ್ಲೇನೂ ತಪ್ಪಿಲ್ಲವಲ್ಲಾ ಈಗ ಆಗಿದೆ. ಬೇಕಾದರೆ ತಾವು ವಿಚಾರಿಸಿಕೊಳ್ಳಿ. ಇದನ್ನೆಲ್ಲಾ ಇತ್ಯರ್ಥ ಮಾಡಬೇಕಾದರೆ ಮತ್ತು ಈಗ ತಾವೇನು ಅಮೆಂಡ್‌ಮೆಂಟನ್ನು ತಂದಿದ್ದೀರಿ ಸೆಕ್ರೆಟರಿಗಳು, ಚೀಫ್ ಸೆಕ್ರೆಟರಿ ಇವರನ್ನು ತನಿಖೆ ಮಾಡಬೇಕಾದರೆ ಎಂಥ ಪೋಲೀಸ್ ಅಧಿಕಾರಿಗಳಿರಬೇಕು ಎನ್ನುವುದನ್ನು ತಾವು ಆಲೋಚನೆ ಮಾಡಿ.

ಶ್ರೀ ಹೆಚ್.ಡಿ. ದೇವೇಗೌಡ : ಎಕ್ಸಿಕ್ಯೂಟಿವ್ ಆರ್ಡರ್‌ನಲ್ಲಿ ಅಡಿಷನಲ್ ಡಿಜಿಪಿ, ಲೋಕಾಯುಕ್ತ ಇಂಡಿಪೆಂಡೆಂಟ್ ಮಾಡಿದ್ದರು. ಈಗ ಅದನ್ನು ಕೂಡ ಈ ಸರ್ಕಾರ ಬಂದಮೇಲೆ ವಾಪಸ್ ಕೊಟ್ಟಿದ್ದೇವೆ. The Additional D.G.P. who is working in Lokayukta was made an independent. We have withdrawn that notification and we have made that additional DGP also to work under the overall supervision of Lokayukta. That is where we have taken a major step.

ಶ್ರೀ ವೈ. ರಾಮಕೃಷ್ಣ : ಒಪ್ಪಿಕೊಂಡೆ. ಅಂದರೆ ಇದುವರೆಗೂ ಅವರು ತಮ್ಮ ಪೋಲೀಸ್ ಮಾತೃಸಂಸ್ಥೆ ಏನು ಇದೆ, ಅದಕ್ಕೆ ಅವರು ಅಧೀನವಾಗಿ ಕೆಲಸ ಮಾಡಬೇಕಾಗಿತ್ತು. ಇನ್ನು ಮುಂದೆ ಅವರು ಲೋಕಾಯುಕ್ತ ಕಂಟ್ರೋಲ್‌ನಲ್ಲಿ ಕೆಲಸ ಮಾಡುವಂಥ ಪ್ರಮೇಯ ಬಂದಿದೆ ಎಂದು ತಾವು ಹೇಳಿದ್ದೀರಿ.

6.30 ಪಿ.ಎಂ.

ಅದನ್ನು ರೂಲ್ಸ್‌ನಲ್ಲಿ ಮಾಡಿದ್ದೇವೆ ಎಂದು ಹೇಳಿದಿರಿ ಅದರ ಬಗ್ಗೆ ಸ್ಪಷ್ಟೀಕರಣ ಇರಬಹುದು.

Sri H.D. Deve Gowda : It was withdrawn by an Executive Order by the previous Government and actually by amending that executive order, we have given back that power to Lokayukta itself. Now he should work under the overall supervision of Lokayukta.

ಶ್ರೀ ವೈ. ರಾಮಕೃಷ್ಣ : ಅಂದರೆ ಅವರೊಬ್ಬರು ಅಂತಲೋ ಅಥವಾ ಎಂಟೈರ್ ಪೋಲೀಸ್ ಫೋರ್ಸ್ ಎಂತಲೋ? ಇದರ ಬಗ್ಗೆ ಸ್ಪಷ್ಟೀಕರಣ ಬೇಕು.

ಶ್ರೀ ಹೆಚ್.ಡಿ. ದೇವೇಗೌಡ : ಅವರು ಬಂದ ಮೇಲೆ ಅವರ ನಿಯಂತ್ರಣ ಇರುತ್ತದೆ. ಅದರಲ್ಲಿ ಏನೂ ಅನುಮಾನ ಇಲ್ಲ.

ಶ್ರೀ ವೈ. ರಾಮಕೃಷ್ಣ : ಸ್ಪಷ್ಟೀಕರಣ ಮಾಡುವಾಗ, ಅಲ್ಲಿ ನಡೆದಿರತಕ್ಕ ವಿಚಾರವನ್ನು ನಾನು ಹೇಳುತ್ತಿದ್ದೇನೆ. ಇಂತಹ ದೊಡ್ಡ ದೊಡ್ಡ ಹುದ್ದೆಗಳಲ್ಲಿರತಕ್ಕವರು ಅನ್ಯಾಯ ಮಾಡಿದಾಗ ಅಥವಾ ಅವರು ತಮ್ಮ ಆಸ್ತಿಯನ್ನು ವರಮಾನಕ್ಕಿಂತ ಮಿಗಿಲಾಗಿ ಮಾಡಿದಾಗ ಅವರನ್ನು ಹಿಡಿಯಬೇಕಾದರೆ ಬಹಳ ಬುದ್ಧಿವಂತರನ್ನು ಹಾಕಿ ಎರಡು ನಾನು ಹೇಳುತ್ತೇನೆ. ಬಹಳ ಬುದ್ಧಿವಂತರನ್ನು ಹಾಕಬೇಕು. ಸೆಕ್ರೆಟರಿಗಳು, ಚೀಫ್ ಸೆಕ್ರೆಟರಿಗಿಂತ ಬುದ್ಧಿವಂತರನ್ನು ಹಾಕಿದರೆ ಉತ್ತಮ ಎಂದು ನನಗೆ ಅನಿಸುತ್ತದೆ. ಇಲ್ಲದಿದ್ದರೆ ಏನಾಗುತ್ತದೆ? ನಾವು ಈಗ ಇರತಕ್ಕ ಕಾಂಪೊಸಿಷನ್ ನೋಡಿದಾಗ ಏಕೆ ಅವರು ಬೇಕಾಗಿಲ್ಲವೋ ಅಥವಾ ಯಾರು ಬಹುಶಃ ನಾನು ಆ ರಾಜಕೀಯ ಪದವನ್ನು ಉಪಯೋಗಿಸಬಾರದು, ಚೆನ್ನಾಗಿರುವುದಿಲ್ಲ. ಅಂತಹವರನ್ನು ತೆಗೆದುಕೊಂಡು ಅಲ್ಲಿ ಹಾಕಿದ್ದೀರಿ. ಅವರಿಂದ ಕಾರ್ಯ ಸಾಧನೆ ಆಗುವುದಿಲ್ಲ. ನಾನು ಹೇಳುತ್ತಿದ್ದೇನೆ, ಧೈರ್ಯವಾಗಿ ಹೇಳುತ್ತಿದ್ದೇನೆ. They must be above board. ಒಳ್ಳೆಯ ಬ್ರಿಲಿಯೆಂಟ್,

ಎಜುಕೇಷನ್ ಕೆರಿಯರ್ ಇರುವವರನ್ನು ತೆಗೆದುಕೊಳ್ಳಿ. ಅವರ ಸರ್ವೀಸ್ ರೆಕಾರ್ಡ್ಸ್ ಚೆನ್ನಾಗಿ ಇರುವವರನ್ನು ತೆಗೆದುಕೊಳ್ಳಿ.

ಶ್ರೀ ಜೆ.ಎಚ್. ಪಟೇಲ್ : ಹಾಸ್ಟಾಗಿ ಇರಬೇಕು.

ಶ್ರೀ ವೈ. ರಾಮಕೃಷ್ಣ : ಸ್ವಾಮಿ ಹಾನೆಸ್ಟಿಗಿಂತ ಬುದ್ಧಿವಂತಿಕೆಯೂ ಇಲ್ಲಿ ಬೇಕು. ಆರ್ಡಿನರಿ ಕ್ರಿಮಿನಲ್ಸ್ ಅವರನ್ನು ಹಿಡಿಯುವುದಿಲ್ಲ. ಆರ್ಡಿನರಿ ಕ್ರಿಮಿನಲ್ ಕೇಸಸ್ ಹಿಡಿಯುವುದಲ್ಲ. ಒಳ್ಳೆಯ ಸ್ಟಾಟ್ಸ್‌ಮೆಂಡಿನಲ್ಲಿ ತಯಾರಾಗಿರತಕ್ಕಂಥ ಅಧಿಕಾರಿಗಳನ್ನು ನಾವು ಸೆಲೆಕ್ಟ್ ಮಾಡಬೇಕು. ಆಗ ಇಂತಹ ದೊಡ್ಡ ದೊಡ್ಡ ಹುಲಿಗಳನ್ನು ಹಿಡಿಯುವುದಕ್ಕೆ ಅವಕಾಶ ಆಗುತ್ತದೆ. ಇಲ್ಲದಿದ್ದರೆ ಇನ್ ವೆಸ್ಟಿಗೇಷನ್ ಫೇಲಾಗುತ್ತದೆ. ಇನ್ವೆಸ್ಟಿಗೇಷನ್ ಫೇಲಾದ ಮೇಲೆ ನಾವು ಆಕ್ಟ್ ಮಾಡಿದರೂ ಏನೂ ಸುಖ ಇರುವುದಿಲ್ಲ. ಇನ್ನೊಂದು ವಿಚಾರ ಅಂದರೆ, ಒಂದು ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಕರಪ್ಷನ್ ಇಲ್ಲ, ಇದು ಭ್ರಷ್ಟಾಚಾರ ರಹಿತವಾದಂತಹ ಸರ್ಕಾರ ಎಂದು ಹೇಳಬೇಕಾದರೆ ಈ ಡಿಪಾರ್ಟ್‌ಮೆಂಟ್ ಚೆನ್ನಾಗಿ ಕೆಲಸ ಮಾಡಬೇಕು. ಈ ಡಿಪಾರ್ಟಮೆಂಟ್ ಚೆನ್ನಾಗಿ ಕೆಲಸ ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಸರ್ಕಾರಕ್ಕೆ ಒಳ್ಳೆಯ ಹೆಸರು ಬಂದರೆ ಜನಗಳಿಗೆ ಒಳ್ಳೆಯದಾಗುತ್ತದೆ. ಆದರೆ ಇದನ್ನು ನೀವು 1984ರಲ್ಲಿ ಇದನ್ನು ಜಾರಿಗೆ ತೆಗೆದುಕೊಂಡು ಬಂದಿರಿ, ಅಲ್ಲಿಂದ ಹತ್ತು ವರ್ಷ ಏನು ಪ್ರಗತಿ ಸಾಧನೆ ಆಗಿದೆ, ಅದನ್ನು ನಾವು ಒಂದು ಕಡೆ ನೋಡಿದಾಗ ಸಮಾಧಾನಕರವಾಗಿಲ್ಲ, ಜನಗಳಿಗೆ ನೆಮ್ಮದಿ ಇಲ್ಲ, ಇವತ್ತು ಲಂಚ ಎಲ್ಲೂ ಹೋಗಿಲ್ಲ, ನಾನು ಧೈರ್ಯವಾಗಿ ಹೇಳುತ್ತೇನೆ. ಕೆಳಗಡೆಯಿಂದ ಮೇಲುಗಡೆಯವರೆಗೆ ಇದೆ. ಭ್ರಷ್ಟಾಚಾರವನ್ನು ತೆಗೆಯುವುದಕ್ಕೆ ಈ ಸಾಧನೆ ಸರಿಯಾಗಿಲ್ಲ, ಇದನ್ನು ನೀವು ಸರಿ ಮಾಡಿದರೆ ನಮ್ಮ ಲೋಕಾಯುಕ್ತ ಆಕ್ಟ್ ಬಂತು ಎನ್ನತಕ್ಕ ವಿಚಾರ ಎಲ್ಲರಿಗೂ ಗೊತ್ತಾಗುತ್ತದೆ. ಅದಕ್ಕೋಸ್ಕರವಾಗಿ ತಾವು ಕೊಡತಕ್ಕ ಲಿಸ್ಟ್ ಬಹಳ ಜಾಗರೂಕತೆಯಿಂದ ಆಯ್ಕೆ ಮಾಡಬೇಕು.

Mr. Speaker : Sorry, I am an young man as against your age. ಭ್ರಷ್ಟಾಚಾರದ ವಿಚಾರಕ್ಕೆ ಕಾನೂನು ಒಂದು ಕಡೆ ಇರಲಿ. ಆ ಭ್ರಷ್ಟಾಚಾರದಲ್ಲಿ ತೊಡಗಿರುವವರಿಗೆ ನಾಚಿಕೆ ಬರಬೇಕು. ನಾಚಿಕೆ ಕಾನೂನಲ್ಲಿ ಎಲ್ಲಿ ತರುವುದಕ್ಕೆ ಆಗುತ್ತದೆ?

ಶ್ರೀ ವೈ. ರಾಮಕೃಷ್ಣ : ಸರ್ಕಾರ ಅದನ್ನು ಪ್ರಚಾರ ಕೊಡಿಸಬೇಕು. ಹೀಗೆ ನಿರ್ಭಯವಾಗಿ ವಿಜಿಲೆನ್ಸ್‌ಗೆ ಕೊಡಬಹುದು, ಅಧ್ಯಕ್ಷರು ತಾವು ಹೇಳಿದಿರಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರು ಹೇಳಿದ ಮಾತಿಗೆ ನಾನು ಒಂದು ವಿಚಾರ ಹೇಳುತ್ತೇನೆ. ಅಧಿಕಾರಿಗಳಿಗೆ ನಾಚಿಕೆ ಎಂದು ಹೇಳಿದಿರಲ್ಲಾ, ಇಲ್ಲಾ ಸ್ಟೇಟ್ ಫಿಯರ್ ಇರಬೇಕು, ಇಲ್ಲ ಮಾರಲ್ ಫಿಯರ್ ಇರಬೇಕು. ಇದು ಎರಡೂ ಇರದೇ ಹೋದರೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ, ಇದು ಏನು ಅಂದರೆ ಎರಡೂ ಇಲ್ಲದೇ ಇರತಕ್ಕದ್ದು ಜಾಸ್ತಿ ಆಗಿದ್ದಾವೆ.

ಶ್ರೀ ವೈ. ರಾಮಕೃಷ್ಣ : ಇದರಲ್ಲಿ ಒಂದು ಲಕ್ಯೂನೂ ಇದೆ. ಎಲ್ಲಾ ತಾವು ಡಿಸೈಡ್ ಮಾಡಿದ್ದೀರಿ, ಲ್ಯಾಕ್ ಆಫ್ ಇಂಟೆಗ್ರಿಟಿ ಎಂದು ಒಂದು ವರ್ಡ್ ಹಾಕಿದ್ದೀರಿ. ಲ್ಯಾಕ್ ಆಫ್ ಇಂಟೆಗ್ರಿಟಿ ಅಂದರೆ ಏನು? ಈ ಸಂದರ್ಭದಲ್ಲಿ ಲ್ಯಾಕ್ ಆಫ್ ಇಂಟೆಗ್ರಿಟಿ ಅಂದರೆ ಏನು? ಅದರ ಅರ್ಥ ಏನು ಎಂಬುದನ್ನು ತಾವು ಡಿಫೈನ್ ಮಾಡಿದ್ದರೆ ಚೆನ್ನಾಗಿತ್ತು. ಅದನ್ನು ಅಟ್ ಲಿಸ್ಟ್ ಈವಾಗ ಅಲ್ಲದೇ ಹೋದರೂ ಮುಂದೆ ನೀವು ತಿದ್ದುಪಡಿ ತರುವಾಗ ಅದರ ಕಡೆಗೆ ಗಮನಹರಿಸಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನೊಂದು ಸುವ್ವೋ ಮೋಟೋ ತಾವೇನು ಎರಡನೆಯ ಅಮೆಂಡ್ ಮೆಂಟ್ ತಂದಿದ್ದೀರಿ, ಇದು ಅತ್ಯಂತ ಅಗತ್ಯವಾಗಿ ಬೇಕಾದಂಥಹದು.

ಏಕೆಂದರೆ ಐಎಎಸ್ ಅಧಿಕಾರಿಗಳನ್ನು ಮತ್ತು ಕೆಎಎಸ್ ಅಧಿಕಾರಿಗಳು ಫಸ್ಟ್ ಗ್ರೇಡ್‌ನಲ್ಲಿ ಯಾರು ಇರುತ್ತಾರೆ ಅಂತಹವರಿಗೆ ಇದು ಅನ್ವಯಿಸುತ್ತಾ ಇರಲಿಲ್ಲ. ಅದಕ್ಕೆ ಬೇರೆ ಪ್ರೊಸೀಜರ್ ಇತ್ತು. ಈಗ ಇದನ್ನು ತೆಗೆದಿದ್ದರಿಂದ ಅವರೂ ಕೂಡ ಈ ಒಂದು ಕಾಮನ್ ಲಾ ಕೆಳಗಡೆ ಬರುತ್ತಾರೆ. ಇದರಿಂದ ಅನುಕೂಲ ಆಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಉದಾಹರಣೆ ಪೋಲೀಸ್ ಕೇಸ್ ಬಗ್ಗೆ ಹೇಳುತ್ತೀರಿ. ಪೋಲೀಸ್ ಎಕ್ಸಸ್ ಆದರೂ ಕೂಡ ತಾವು ಎನ್‌ಕ್ವೈರಿ ನಡೆಸಬೇಕಾಗುತ್ತದೆ. ನಾನು ಓಪನ್ ಆಗಿ ಹೇಳುತ್ತಿದ್ದೇನೆ. ಯಾರು ತನ್ನ ಅಧಿಕಾರವನ್ನು ಚಲಾಯಿಸುವುದಿಲ್ಲವೋ ಅಥವಾ ಯಾರು ತನ್ನ ಅಧಿಕಾರವನ್ನು ಎಕ್ಸಸ್ ಆಗಿ ಚಲಾಯಿಸುತ್ತಾರೆ, ಅಂತಹವರನ್ನು ಕೂಡ ತಾವು ಹೊಣೆ ಮಾಡುವುದಾದರೆ ಬಹುಶಃ ಅದರಿಂದ ಒಳ್ಳೆಯದಾಗುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಕಡೆಯದಾಗಿ ನಿಮ್ಮ ಹತ್ತಿರ ಸಿಓಡಿ ಇದೆ. ಸಿಬಿಐ ಸೆಂಟ್ರಲ್ ನಲ್ಲಿದೆ. ಇವೆರಡಕ್ಕೂ ಮೀರಿದಂತಹ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಆಗಬೇಕು. ನಮ್ಮ ವಿಜಿಲೆನ್ಸ್. ಆಗ ಅದಕ್ಕೆ ಹೆಸರು ಬರುತ್ತದೆ. ಇಲ್ಲದೇ ಹೋದರೆ ಏನಾಗುತ್ತದೆ, ಅದೂ —ಒಂದು ಡಿಪಾರ್ಟ್‌ಮೆಂಟ್, ಅದು ಬರೀ ಡಿಪಾರ್ಟ್‌ಮೆಂಟ್ ಆಗುತ್ತದೆ. ಸುಮ್ಮನೇ ಬೇಕಾದಷ್ಟು ಲಕ್ಷಾಂತರ ಕೋಟ್ಯಾಂತರ ರೂಪಾಯಿ ಹಣ ಖರ್ಚು ಮಾಡುತ್ತೀರಿ, ಆದರೆ ಎಫೆಕ್ಟೀವ್ ಆಗಿ ಕೆಲಸ ಆಗುತ್ತಿಲ್ಲ. ಅದಕ್ಕೋಸ್ಕರವಾಗಿ ತಾವು ನೀರಾವರಿಯೊಳಗೆ ಯಾವ ಒಂದು ಮನೋಭಾವವನ್ನು ತಾಳಿದ್ದೀರಿ, ಅದೇ ಒಂದು ಮನೋಭಾವವನ್ನು ದಯವಿಟ್ಟು ತಾವು ವಿಜಿಲೆನ್ಸ್‌ಗೆ ತೆಗೆದುಕೊಂಡಿದ್ದು ಆದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಕರಪ್‌ಷನ್ ಹೋಗುತ್ತದೆ ಎಂದು ಹೇಳಿ ಈ ಒಂದು ಬಿಲ್ಲನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಮಾನ್ಯ ಅಧ್ಯಕ್ಷರೇ, ನಾನು ಜಾಸ್ತಿ ವಿಚಾರ ಹೇಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ತಂದಿರತಕ್ಕದ್ದು ಬಹಳ ಸೂಕ್ತವಾದುದು. ಆದರೆ ಇದರಲ್ಲಿ ಸೆಕ್ಷನ್ 3 ಅಮೆಂಡ್‌ಮೆಂಟ್ ಏನು ತಂದಿದ್ದೀರಿ ಅಂದರೆ

"Provided that in case of public servant referred to in clauses 3 & 4 , Lokayukta may also investigate."

ಇಲ್ಲಿ "May also review and investigate."

ಎಂದು ಹಾಕಿದರೆ ಬಹಳ ಒಳ್ಳೆಯದಾಗುತ್ತದೆ. ಏಕೆಂದರೆ ನಮಗೆ ಈಗಾಗಲೇ ಐದಾರು ಜನ ಆಫಿಸರ್ಸ್ ಅವರ ಬಿ ರಿಪೋರ್ಟ್ ಅಕ್ಸೆಪ್ಟ್ ಮಾಡಿರತಕ್ಕದ್ದು ನಾವು ನೋಡಿದ್ದೇವೆ. ಬಹಳ ಪಬ್ಲಿಕ್ ಇಂಟರೆಸ್ಟ್‌ನಲ್ಲಿ, ಆ ಕಾರಣ ನಾನು ದಯವಿಟ್ಟು ಕೇಳುವುದು Review powers also must be given to Lokayukta.

ರೆವ್ಯೂ ಪವರ್ಸ್ ನೀವು ಕೊಡದೇ ಇತ್ತು ಎಂದರೆ ತಾವೇನು ಮಾಡಿದರೂ ಸರಿ ಹೋಗುವುದಿಲ್ಲ. ಅದರಿಂದ ರಿವ್ಯೂ ಎನ್ನತಕ್ಕ ಒಂದು ವರ್ಡನ್ನು ಇಲ್ಲಿ ತಾವು ಹಾಕಬೇಕು. ಇಲ್ಲದೇ ಇದ್ದರೆ ಇದನ್ನು ನೀವು ತಂದರೂ ಅದರಿಂದ ಪ್ರಯೋಜನ ಆಗುವುದಿಲ್ಲ. ಅದನ್ನು ತಾವು ಮಾಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎ.ಜೆ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕ ಲೋಕಾಯುಕ್ತದ ಒಂದು ತಿದ್ದುಪಡಿಯನ್ನು ಸರ್ಕಾರ ಇವತ್ತು ಸದನದಲ್ಲಿ ಇಟ್ಟಿದೆ. ಅವರು ಕೂಡ ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಲೋಕಾಯುಕ್ತದ ಬಿಲ್ಲನ್ನು ಹರಿತ ಮಾಡಬೇಕು ಎಂದು ಹೇಳಿ ಘೋಷಣೆ ಮಾಡಿದ್ದರು. ಅವರ ಉದ್ದೇಶ ಏನೋ ಸಾರ್ವಜನಿಕ ಜೀವನವನ್ನು ಶುದ್ಧೀಕರಣ ಮಾಡಬೇಕು ಎನ್ನತಕ್ಕ ಉದ್ದೇಶ ಇಟ್ಟುಕೊಂಡು ಲೋಕಾಯುಕ್ತ ಕಾಯಿದೆಯನ್ನು ಜನತಾ ಪಕ್ಷ ಅಧಿಕಾರದಲ್ಲಿದ್ದಾಗ

ತಂದರು. ಆದರೆ ನನಗಂತೂ ಸಂಪೂರ್ಣವಾದಂತಹ ಸಂಶಯ ಇದೆ. ಈ ಖೋಟಾ ಅರ್ಜಿಗಳನ್ನು ಅವರೇ ಸೃಷ್ಟಿ ಮಾಡಿ ಶೋಷಣೆ ಮಾಡತಕ್ಕ ಮಟ್ಟಕ್ಕೆ ಹೋಗಿರತಕ್ಕಂಥ ಆ ಲೋಕಾಯುಕ್ತದಿಂದ ಸಾರ್ವಜನಿಕ ಜೀವನ ಶುದ್ಧೀಕರಣ ಆಗುತ್ತದೆಯೋ ಅಥವಾ ಆಗಿದೆ ಎನ್ನುವುದನ್ನು ಕೂಡ ನಾನು ಬಹಳ ಅನುಮಾನದಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಅನ್ಯಾಯವಾಗಿ, ಅಕ್ರಮವಾಗಿ ಯಾರು ಹಣವನ್ನು ಗಳಿಸುತ್ತಾರೆ ಅಂತಹವರನ್ನು ಬಲಿ ಹಾಕಲಿಕ್ಕೆ ಈ ಒಂದು ವ್ಯವಸ್ಥೆಯನ್ನು ಅವರು ಜಾರಿಗೆ ತಂದರು. ಅದಕ್ಕೆ ಒಂದು ನನ್ನ ಸಲಹೆ ಕಳ್ಳಕಾಕರ, ಖಿದೀಮರ ಹಣ ಇರತಕ್ಕ ಒಂದು ತಾಣ ಇದು. ಆ ತಾಣದ ಮೇಲೆ ತನಿಖೆ ಮಾಡುವುದಕ್ಕೆ ಯಾವುದೇ ಸರ್ಕಾರ ಇದುವರೆಗೆ ಧೈರ್ಯ ಮಾಡಿಲ್ಲ. ಆ ರಾಜಕೀಯದ ಇಚ್ಛಾಶಕ್ತಿ ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಅದು ಬಹಳ ದೊಡ್ಡ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿದರೆ ಕೆಲವು ಮತಗಳು, ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಒಳ್ಳೆಯ ಕೆಲಸ ಮಾಡುತ್ತಿದ್ದಾವೆ. ಕೆಲವು ಮತಗಳಲ್ಲಿ ಈ ಕಳ್ಳರ ಖಿದೀಮರ ದುಡ್ಡನ್ನು ಇಟ್ಟಿರುವುದು ಆಮೇಲೆ ತೆಗೆದುಕೊಂಡು ಬಂದು ದುರುಪಯೋಗ ಮಾಡಿಕೊಳ್ಳತಕ್ಕದ್ದು ನಡೆಯುತ್ತಿದೆ. ಇಂತಹ ಮತಗಳು ಏನಿದ್ದಾವೆ, ಆ ಮಠಗಳಲ್ಲಿ ಕಳ್ಳರು ದುಡ್ಡು ತೆಗೆದುಕೊಂಡು ಹೋಗಿ ಇಡುತ್ತಾರೆ, ಯಾರು ಇಟ್ಟರೂ ಬೇಡ; ಹೋಗಲಿ, ಅವರು ವಾಪಸ್ ತೆಗೆದುಕೊಳ್ಳುತ್ತಾರಲ್ಲಾ, ಅವರು ಖರ್ಚು ಮಾಡಿರುವುದನ್ನಾದರೂ ಲೆಕ್ಕ ಕೊಡಬೇಕಲ್ಲಾ, ಅದು ಸಾರ್ವಜನಿಕರ ದುಡ್ಡಲ್ಲವೇ. ಅದನ್ನು ಮಾಡಿದರೆ ಅರ್ಧ ಮಟ್ಟ ಹಾಕಿದ ಹಾಗೆ ಆಗುತ್ತದೆ. ಈ ಕಳ್ಳಕಾಕರ ಹಣವನ್ನು. ಅದಕ್ಕೆ ನಾನು ಕೋರಿಕೊಳ್ಳುವುದು ಈ ಸರ್ಕಾರಕ್ಕೆ ಎಲ್ಲಾ ಮಠದ ಧರ್ಮಾಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅದನ್ನು ತನಿಖೆಗೆ ಒಳಪಡಿಸುವುದಕ್ಕೆ ಈ ಪ್ರಸ್ತುತ ಸರ್ಕಾರಕ್ಕೆ ಆ ರಾಜಕೀಯ ಒಂದು ಶಕ್ತಿ ಇದೆಯಾ, ಧೈರ್ಯ ಇದೆಯಾ? ಅಂತಹ ಕಾನೂನನ್ನು ಏನಾದರೂ ಸರ್ಕಾರ ತರುತ್ತದೆಯೇ ಎಂದು ನಾನು ಅವರಿಂದ ತಿಳಿಯಬಯಸುತ್ತಾ ಇದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಎರಡು ಸರಳವಾದಂತಹ, ಸರಳತೆ ಇದ್ದರೂ ಅಷ್ಟೇ ಪ್ರಾಮುಖ್ಯವಾದಂತಹ ತಿದ್ದುಪಡಿಗಳನ್ನು ತಂದಿದ್ದೇವೆ. ಮಾಜಿ ಮಂತ್ರಿಗಳೂ, ಹಿರಿಯ ಸದಸ್ಯರೂ ಆದ ಮಾನ್ಯ ರಾಮಕೃಷ್ಣ ಅವರು ಮಾತನಾಡುವಾಗ ಅದರಲ್ಲಿ ಹಿರಿಯ ಅಧಿಕಾರಿಗಳನ್ನೂ ಕೂಡ ಈ ವ್ಯಾಪ್ತಿಯಲ್ಲಿ ತರತಕ್ಕ ನಿರ್ಣಯವನ್ನು ಈ ತಿದ್ದುಪಡಿಯಲ್ಲಿ ಮಾಡಿದರೆ ಬಹಳ ಒಳ್ಳೆಯದು ಎಂದು ಹೇಳಿದರು. ಸೋದರೆ ನಮ್ಮ ಪ್ರಮೀಳಾ ನೇಸರ್ಗಿಯವರು ರಿವ್ಯೂನ ಒಂದು ಪ್ರಾವಿಷನ್ ಕೂಡ ಮಾಡಲಿಕ್ಕೆ ಸಾಧ್ಯವೇ ಎಂದು ಕೇಳಿದರು. ಇದನ್ನು ಏಕೆ ಮಾಡಬಾರದು ಎಂದೂ ಕೇಳಿದರು. ಇದರ ಬಗ್ಗೆ ನಾನು ಸಮಗ್ರವಾದಂತಹ ಮತ್ತೊಂದು ತಿದ್ದುಪಡಿ ತರಬೇಕೆಂದು ನನ್ನ ಇಚ್ಛೆ ಇದೆ. ಆ ಸಂದರ್ಭದಲ್ಲಿ ಆ ನಿಮ್ಮ ಸಲಹೆಯನ್ನು ಕನ್ಸಿಡರ್ ಮಾಡಲಿಕ್ಕೂ ಪ್ರೋಸ್ ಅಂಡ್ ಕಾನ್ಸ್ ಎಲ್ಲಾ ಯೋಚನೆ ಮಾಡಿ ನಾವು ಆ ಸಂದರ್ಭದಲ್ಲಿ ಕಾನ್‌ಫಿಡೆನ್ಷಿಯಲ್ ರೆಜಿಸ್ಟ್ಲೇಷನ್ ತರಬೇಕೆಂದು ಯೋಚನೆಯಲ್ಲಿದ್ದೇವೆ. ನಾನು ಆ ಪ್ರಯತ್ನವನ್ನು ಮಾಡುತ್ತೇನೆಂಬ ಮಾತನ್ನು ಹೇಳುತ್ತೇನೆ. ಮಾನ್ಯ ರಾಮಸ್ವಾಮಿಯವರು ಏನು ಸಲಹೆ ಮಾಡಿದ್ದಾರೆ, ಅದು ಸ್ವಲ್ಪಮಟ್ಟಿಗೆ ವಾಸ್ತವಿಕತೆಗೆ ಅಂತಹ ಒಂದು ಸಲಹೆಯನ್ನು ಮಾನ್ಯ ಮಾಡುವುದು ಕಷ್ಟ ಆಗಬಹುದು. ನಿಮ್ಮ ಮನಸ್ಸಿನಲ್ಲಿ ಸದುದ್ದೇಶ ಇದ್ದರೂ ಅದನ್ನು ಪ್ರಾಕ್ಟಿಕಲ್ ಆಗಿ ಇಂಪ್ಲಿಮೆಂಟ್ ಮಾಡುವುದು ಕಷ್ಟ.

ಆ ಕಾರಣದಿಂದ ದಯಮಾಡಿ ಸರ್ಕಾರ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ಹೇಳಿ ಇದನ್ನು ತಾವು ಸಭೆಯ ಅಂಗೀಕಾರಕ್ಕಾಗಿ ಇಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ: "1995ನೇ ಸಾಲಿನ ಕರ್ನಾಟಕ ಲೋಕಾಯುಕ್ತ(ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ರಿಂದ 3ರ ವರೆಗೆ

ಅಧ್ಯಕ್ಷರು : ಖಂಡ 2 ರಿಂದ 3 ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಖಂಡ 2ರಿಂದ 3ರ ವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ : ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ , ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "1995ರ ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆಯನ್ನು ನೀಡಲಾಯಿತು.

2. ಕರ್ನಾಟಕ ಸ್ಟಾಂಪುಗಳ (ಎರಡನೆಯ ತಿದ್ದುಪಡಿ)ವಿಧೇಯಕ, 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ಸ್ಟಾಂಪುಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜ ಪೇಟೆ) : ಇದರ ಬಗ್ಗೆ ಕೆಲವು ಅಬ್ಜಕ್ಷನ್ಸ್ ರೈಸ್ ಮಾಡಿದ್ದೆವು. ಆವತ್ತೇ ತಮಗೆ ಇದರ ಬಗ್ಗೆ ಕೊಟ್ಟಿದ್ದೇವೆ.